158ನೇ ಪರಿ SL NO:-56 ದಿ-16-03-26

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ ರವರು ಮಾನ್ಯ ಸದನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರಿಸುವ ಕುರಿತು.**

## :ಪ್ರಶ್ನೆ:

ಪ್ರಶ್ನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಡಿಯಲ್ಲಿ ದಿನಾಂಕ:21/03/2022ರ ಅಧಿಸೂಚನೆಯನ್ವಯ ನಡೆದಿರುವ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (GPTR) ನೇಮಕಾತಿ ಪ್ರಕ್ರಿಯೆಯಲ್ಲಿ ಕೆಲವು ವಿವಾಹಿತ ಮಹಿಳಾ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯಕ್ಕಾಗಿ ತಮ್ಮ ತಂದೆಯ ಆದಾಯದ ಆಧಾರದ ಮೇಲೆ Form-F ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಸಲ್ಲಿಸಿದ್ದರು. ಆದರೆ ಇಲಾಖೆಯು ಅವರ ಹೆಸರುಗಳನ್ನು ದಿನಾಂಕ:19/10/2023 ಮತ್ತು 02/11/2023 ರಂದು ಪ್ರಕಟಿಸಿದ ಕೌನ್ಸಿಲಿಂಗ್ ಅರ್ಹತಾ ಪಟ್ಟಿಯಲ್ಲಿ ಸೇರಿಸಿರಲಿಲ್ಲ. ಇದರಿಂದಾಗಿ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ದಾಖಲಿಸಿದ್ದರು (ಅರ್ಜಿ ಸಂಖ್ಯೆ:20807-20836/2025). ಈ ಪ್ರಕರಣವನ್ನು ಪರಿಶೀಲಿಸಿದ ನ್ಯಾಯಮಂಡಳಿಯು, ನೇಮಕಾತಿ ಅಧಿಸೂಚನೆಯಲ್ಲಿ Form-F ಪ್ರಮಾಣಪತ್ರ ಸಲ್ಲಿಸುವುದನ್ನು ಮಾತ್ರ ಹೇಳಲಾಗಿದೆ ಮತ್ತು ವಿವಾಹಿತ ಮಹಿಳೆಯರು ಪತಿಯ ಆದಾಯದ ಪ್ರಮಾಣಪತ್ರವೇ ಸಲ್ಲಿಸಬೇಕು ಎಂಬ ಸ್ಪಷ್ಟ ನಿಯಮ ಇಲ್ಲ ಎಂದು ಗಮನಿಸಿದೆ. ಅಲ್ಲದೆ, ಜಾತಿಯು ಜನ್ಮದಿಂದ ನಿರ್ಧಾರವಾಗುತ್ತದೆ ಮತ್ತು "Creamy layer" ನಿರ್ಧಾರಕ್ಕೆ ಪೋಷಕರ ಆದಾಯವೇ ಮುಖ್ಯ ಎಂಬ ಉನ್ನತ ನ್ಯಾಯಾಲಯಗಳ ಸ್ಥಾಪಿತ ಕಾನೂನು ತತ್ತ್ವವನ್ನು ಉಲ್ಲೇಖಿಸಿ, ಇಲಾಖೆಯು ಅಭ್ಯರ್ಥಿಗಳನ್ನು ಪಟ್ಟಿಯಿಂದ ಹೊರತುಪಡಿಸಿದ ಕ್ರಮ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದು. ದಿನಾಂಕ:27/02/2026 ರಂದು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿರುವ ಆದೇಶದಂತೆ ದಿನಾಂಕ:19/10/2023 ಮತ್ತು 02/11/2023ರಂದು ಪ್ರಕಟಿಸಿರುವ ಕೌನ್ಸಿಲಿಂಗ್ ಅರ್ಹತಾ ಪಟ್ಟಿಗಳನ್ನು ರದ್ದುಗೊಳಿಸಿ ಪುನಃ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಪ್ರಸ್ತುತ ನೀಡಿರುವ ಆದೇಶದಂತೆ 2 ತಿಂಗಳೊಳಗಾಗಿ ಪ್ರಕ್ರಿಯೆಯನ್ನು ಮುಗಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತದೆ.

ಆದ್ದರಿಂದ, ಈ ಬಗ್ಗೆ ಮಾನ್ಯ ನ್ಯಾಯಮಂಡಳಿಯು ನೀಡಿದ ಆದೇಶವನ್ನು ನಿಗದಿತ ಅವಧಿಯೊಳಗಾಗಿ ಅನುಷ್ಠಾನಗೊಳಿಸುವಂತೆ ಕ್ರಮಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

## : ಉತ್ತರ :

2022ನೇ ಸಾಲಿನ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿವಾಹಿತ ಮಹಿಳಾ ಅಭ್ಯರ್ಥಿಗಳು ತಂದೆಯ ವರಮಾನದೊಂದಿಗೆ ಸಲ್ಲಿಸಿದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಪರಿಗಣಿಸಬೇಕೋ? ಅಥವಾ ಗಂಡನ ವರಮಾನದೊಂದಿಗೆ ಸಲ್ಲಿಸಿದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪರಿಗಣಿಸಬೇಕೋ? ಎಂಬ

ವಿಷಯದ ಕುರಿತಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ SLP.No.27984-988/2023ರಲ್ಲಿ ದಿನಾಂಕ:16/10/2025ರ ತೀರ್ಪಿನಲ್ಲಿ ಸದರಿ ವಿಷಯವನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಯು 06 ತಿಂಗಳಲ್ಲಿ ಇತ್ಯರ್ಥಪಡಿಸುವಂತೆ ನಿರ್ದೇಶನ ನೀಡಿರುತ್ತದೆ.

ಅದರಂತೆ ಅಭ್ಯರ್ಥಿಗಳು ಮಾನ್ಯ ಕೆ.ಎ.ಟಿ ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ: 4605-4626/2023 ಮತ್ತು ಸಂಬಂಧಿತ ಪ್ರಕರಣಗಳಲ್ಲಿ, ಮಾನ್ಯ ಕೆ.ಎ.ಟಿ ಕಲ್ಬುರ್ಗಿ ಇಲ್ಲಿ ಅರ್ಜಿ ಸಂಖ್ಯೆ: 20807-20836/2025 ಮತ್ತು ಇತರೆ ಸಂಬಂಧಿತ ಪ್ರಕರಣಗಳಲ್ಲಿ ಹಾಗೂ ಮಾನ್ಯ ಕೆ.ಎ.ಟಿ ಬೆಳಗಾವಿ ಇಲ್ಲಿ ಅರ್ಜಿ ಸಂಖ್ಯೆ: 11293/2025 ಮತ್ತು ಇತರೆ ಸಂಬಂಧಿತ ಪ್ರಕರಣಗಳಲ್ಲಿ ಪ್ರಕರಣ ದಾಖಲಿಸಿದ್ದರು.

ಮಾನ್ಯ ಕೆ.ಎ.ಟಿ ಕಲ್ಬುರ್ಗಿ ಇಲ್ಲಿ ದಾಖಲಾಗಿದ್ದ ಅರ್ಜಿ ಸಂಖ್ಯೆ: 20807-20836/2025 ಮತ್ತು ಸಂಬಂಧಿತ ಪ್ರಕರಣಗಳಲ್ಲಿ ದಿನಾಂಕ:27/02/2026 ರಂದು ತೀರ್ಪು ನೀಡಿರುತ್ತದೆ. ಮಾನ್ಯ ಕೆ.ಎ.ಟಿ ಬೆಂಗಳೂರು ಇಲ್ಲಿ ದಾಖಲಾಗಿದ್ದ ಅರ್ಜಿ ಸಂಖ್ಯೆ: 4605-4626/2023 ಮತ್ತು ಸಂಬಂಧಿತ ಪ್ರಕರಣಗಳಲ್ಲಿ ಸುದೀರ್ಘವಾದ ವಿಚಾರಣೆ ನಡೆದಿದ್ದು, ಮಾನ್ಯ ನ್ಯಾಯಮಂಡಳಿಯು ದಿನಾಂಕ: 05/03/2026 ರಂದು ಅಂತಿಮ ವಿಚಾರಣೆ ನಡೆಸಿ, ತೀರ್ಪನ್ನು ಕಾಯ್ದಿರಿಸಿರುತ್ತದೆ. ಅದೇ ರೀತಿಯಾಗಿ ಬೆಳಗಾವಿ ಕೆ.ಎ.ಟಿ ಯಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ವಿಚಾರಣೆ ಬಾಕಿ ಇರುತ್ತದೆ.

ಮಾನ್ಯ ಕೆ.ಎ.ಟಿಯ ಪ್ರಧಾನ ಪೀಠವಾದ ಬೆಂಗಳೂರು ಮತ್ತು ಮಾನ್ಯ ಕೆ.ಎ.ಟಿ ಬೆಳಗಾವಿ ಇಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ತೀರ್ಪು ಬಂದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು.

**ಇಪಿ 71 ಪಿಎಂಎ 2026**

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು